50

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ ನಾಗರಾಜು ಇವರ ನಿಯಮ 330 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

**ವಿಷಯ:** ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಆರ್ಥಿಕ ವಿಕಾಸ, ಕೈಗಾರಿಕೀಕರಣ, ವಿದ್ಯುನ್ಮಾನ ಮೂಲಸೌಕರ್ಯ, ಉದ್ಯೋಗಾವಕಾಶಗಳು, ಜಲವಿವಾದಗಳು, ಶೈಕ್ಷಣಿಕ ಸೌಲಭ್ಯಗಳು, ಆರೋಗ್ಯ ಕ್ಷೇತ್ರ, ಆಯವ್ಯಯದಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಅನುದಾನ ಹಂಚಿಕೆ, ಪ್ರಾದೇಶಿಕ ಅಸಮತೆ ಮತ್ತು ಇನ್ನೂ ಹತ್ತಹಲವಾರು ಸಮಸ್ಯೆಗಳು ಬಗೆಹರಿಸಲು ಸರ್ಕಾರವು ಕೈಗೊಂಡಿರುವ ಯೋಜನೆಗಳು ಹಾಗೂ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕವನ್ನು ಸಮತೋಲನವಾಗಿ ಅಭಿವೃದ್ಧಿಪಡಿಸುವ ಕುರಿತು ಸದನದಲ್ಲಿ ಚರ್ಚಿಸಲು ನಿಯಮ-330ರಡಿ ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

******

**ಉತ್ತರ:-**

ರಾಜ್ಯ ಸರ್ಕಾರವು ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ 2000ನೇ ಇಸವಿಯಲ್ಲಿ ಡಾ: ಡಿ.ಎಂ ನಂಜುಂಡಪ್ಪ ರವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಲು ಉನ್ನತಾಧಿಕಾರ ಸಮಿತಿಯನ್ನು ರಚಿಸಿತು. ಸದರಿ ಸಮಿತಿಯು ಜೂನ್-2002ರಲ್ಲಿ ಸರ್ಕಾರಕ್ಕೆ ವರದಿ ನೀಡಿತು. ಸದರಿ ವರದಿ ಪ್ರಕಾರ ರಾಜ್ಯದಲ್ಲಿ 175 ತಾಲ್ಲೂಕುಗಳಲ್ಲಿ 114 ತಾಲ್ಲೂಕುಗಳು ಹಿಂದುಳಿದಿರುವಿಕೆಯನ್ನು ಗುರುತಿಸಿ ಇವುಗಳಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳು 39, ಅತೀ ಹಿಂದುಳಿದ ತಾಲ್ಲೂಕುಗಳು 40, ಹಿಂದುಳಿದ ತಾಲ್ಲೂಕುಗಳು 35 ತಾಲ್ಲೂಕುಗಳು ಎಂದು ವರದಿ ನೀಡಿತು. ಸದರಿ ವರದಿ ಪ್ರಕಾರ ಸಾಪೇಕ್ಷವಾಗಿ 61 ತಾಲ್ಲೂಕುಗಳು ಅಭಿವೃದ್ಧಿ ಹೊಂದಿರುವ ತಾಲ್ಲೂಕುಗಳಾಗಿರುತ್ತದೆ.

ಉತ್ತರ ಕರ್ನಾಟಕಕ್ಕೆ ಸೇರಿದಂತೆ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಅತ್ಯಂತ ಹಿಂದುಳಿದ 22 ತಾಲ್ಲೂಕುಗಳಿದ್ದು, ಅತೀ ಹಿಂದುಳಿದ 05 ತಾಲ್ಲೂಕುಗಳಿದ್ದು ಹಾಗೂ ಹಿಂದುಳಿದ 02 ತಾಲ್ಲೂಕುಗಳಾಗಿರುತ್ತವೆ. ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ 03 ತಾಲ್ಲೂಕುಗಳು ಇರುತ್ತವೆ.

ಬೆಳಗಾವಿ ವಿಭಾಗದಲ್ಲಿ ಅತ್ಯಂತ ಹಿಂದುಳಿದ 05 ತಾಲ್ಲೂಕುಗಳಿದ್ದು, ಅತೀ ಹಿಂದುಳಿದ 12 ತಾಲ್ಲೂಕುಗಳಿದ್ದು ಹಾಗೂ ಹಿಂದುಳಿದ 14 ತಾಲ್ಲೂಕುಗಳಾಗಿರುತ್ತವೆ. ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ 26 ತಾಲ್ಲೂಕುಗಳು ಇರುತ್ತವೆ.

ಉತ್ತರ ಕರ್ನಾಟಕದಲ್ಲಿ 27 ಅತ್ಯಂತ ಹಿಂದುಳಿದ ತಾಲ್ಲೂಕುಗಳು, 17 ಅತೀ ಹಿಂದುಳಿದ ತಾಲ್ಲೂಕುಗಳು, 16 ಹಿಂದುಳಿದ ತಾಲ್ಲೂಕುಗಳಿದ್ದು, ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ 29 ತಾಲ್ಲೂಕುಗಳಾಗಿದ್ದು, ಒಟ್ಟಾರೆ 89 ತಾಲ್ಲೂಕುಗಳಲ್ಲಿ 29 ತಾಲ್ಲೂಕುಗಳು ಮಾತ್ರ ಅಭಿವೃದ್ಧಿ ಹೊಂದಿದ್ದು, ರಾಜ್ಯದ ಇತರೆ ಭಾಗಗಳಿಗೆ ಹೋಲಿಸಿದ್ದಲ್ಲಿ ಉತ್ತರ ಕರ್ನಾಟಕವು ನಿರ್ದಿಷ್ಟ ಪ್ರಮಾಣದಲ್ಲಿ ಅಭಿವೃದ್ಧಿಯಾಗದೇ ಇರುವುದು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಡಾ: ಡಿ.ಎಂ ನಂಜುಂಡಪ್ಪರವರು ನೀಡಿರುವ ವರದಿಯಲ್ಲಿ ಕಲ್ಯಾಣ (ಹೈದ್ರಾಬಾದ್) ಕರ್ನಾಟಕ ಭಾಗಕ್ಕೆ ಶೇಕಡ 40ರಷ್ಟು, ಬೆಳಗಾವಿ ವಿಭಾಗಕ್ಕೆ ಶೇಕಡ 20ರಷ್ಟು, ಅಂದರೆ ಒಟ್ಟಾರೆ ಉತ್ತರ ಕರ್ನಾಟಕ ಭಾಗಕ್ಕೆ ಶೇಕಡ 60ರಷ್ಟು ಅನುದಾನವನ್ನು ಹಂಚಿಕೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಡಾ: ಡಿ.ಎಂ ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ ರಾಜ್ಯ ಸರ್ಕಾರವು 2007-08ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಿದ್ದು, ಈ ಯೋಜನೆಗೆ 2007-08 ರಿಂದ 2024-25ರವರೆವಿಗೆ ಡಾ: ಡಿ.ಎಂ ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ ರೂ.48,866.00 ಕೋಟಿಗಳನ್ನು ಹಂಚಿಕೆ ಮಾಡಿದ್ದು, ರೂ.40,097.00 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ರೂ.36,804.00 ಕೋಟಿಗಳನ್ನು ವೆಚ್ಚ ಮಾಡಿರುತ್ತದೆ. ಈ ಅನುದಾನದಲ್ಲಿ ಕಲಬುರಗಿ ವಿಭಾಗಕ್ಕೆ ರೂ.11,229.51ಕೋಟಿಗಳನ್ನು, ಬೆಳಗಾವಿ ವಿಭಾಗಕ್ಕೆ ರೂ.5,819.70 ಕೋಟಿಗಳನ್ನು ವೆಚ್ಚ ಮಾಡಿದ್ದು, ಒಟ್ಟಾರೆ ಉತ್ತರ ಕರ್ನಾಟಕಕ್ಕೆ ರೂ.17,049.21 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಉತ್ತರ ಕರ್ನಾಟಕದಲ್ಲಿ ಹೈದ್ರಾಬಾದ್ ಕರ್ನಾಟಕ್ಕೆ ಸಂಬಂಧಿಸಿದಂತೆ 2013ರಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಪ್ರಾರಂಭ ಮಾಡಿದ್ದು, 2013-14 ರಿಂದ 2024-25ರವರೆವಿಗೆ ರೂ.19,878.33 ಕೋಟಿಗಳನ್ನು ಹಂಚಿಕೆ ಮಾಡಿದ್ದು, ರೂ.16,228.80 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಈವರೆವಿಗೆ ರೂ.13,488.45 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಡಾ: ಡಿ.ಎಂ ನಂಜುಂಡಪ್ಪ ವರದಿಯಾನುಸಾರ ಬೆಳಗಾವಿ ವಿಭಾಗದಲ್ಲಿ ಕೈಗೊಂಡಿರುವ ಪ್ರಮುಖ ಯೋಜನೆಗಳ ವಿವರಗಳನ್ನು ಅನುಬಂಧ-1ರಲ್ಲಿ, ಕಲಬುರಗಿ ವಿಭಾಗಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಪ್ರಮುಖ ಯೋಜನೆಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಕಲ್ಯಾಣ ಕರ್ನಾಟಕ ಭಾಗಕ್ಕೆ ಸಂಬಂಧಿಸಿದಂತೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗೊಂಡಿರುವ ಪ್ರಮುಖ ಯೋಜನೆಗಳ ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

ಉತ್ತರ ಕರ್ನಾಟಕಕ್ಕೆ ಡಾ: ಡಿ.ಎಂ ನಂಜುಂಡಪ್ಪ ವರದಿಯನ್ವಯ ಈವರೆವಿಗೆ ರೂ.17,049.21 ಕೋಟಿಗಳನ್ನು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ರೂ.13,488.45 ಕೋಟಿಗಳು ಸೇರಿದಂತೆ ವಿಶೇಷ ಅಭಿವೃದ್ಧಿ ಯೋಜನೆ ಮತ್ತು ಮಂಡಳಿಯಿಂದ ಒಟ್ಟು ರೂ.30,537.66 ಕೋಟಿಗಳನ್ನು ವೆಚ್ಚ ಮಾಡುವುದರ ಮೂಲಕ ಉತ್ತರ ಕರ್ನಾಟಕದಲ್ಲಿ ಶೈಕ್ಷಣಿಕ ಸೌಲತ್ತುಗಳಲ್ಲಿ ಅಭಿವೃದ್ಧಿ, ರಸ್ತೆ ಮತ್ತು ಸೇತುವೆಗಳು ಸೇರಿದಂತೆ ಮೂಲಸೌಕರ್ಯ, ಸಾಮಾಜಿಕ ಕ್ಷೇತ್ರಗಳಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಸ್ಟೆಲ್ ಮತ್ತು ವಸತಿ ನಿಲಯಗಳ ನಿರ್ಮಾಣ, ಕೈಗಾರಿಕಾ ವಲಯಗಳ ಅಭಿವೃದ್ಧಿ ಮೂಲಕ ಆರ್ಥಿಕ ವಿಕಾಸ ಮತ್ತು ಕೈಗಾರಿಕೀಕರಣ ಹಾಗೂ ಉದ್ಯೋಗಾವಕಾಶಗಳ ಸೃಜನೆ, ಆರೋಗ್ಯ ಕ್ಷೇತ್ರದಲ್ಲಿ PHC, CHC ತಾಲ್ಲೂಕು ಆಸ್ಪತ್ರೆಗಳು ಮತ್ತು ಜಿಲ್ಲಾಸ್ಪತ್ರೆಗಳು, ಜಯದೇವ ಹೃದ್ರೋಗ ಆಸ್ಪತ್ರೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಪ್ರಾದೇಶಿಕ ಅಸಮತೋಲನೆಯನ್ನು ನಿವಾರಣೆ ಮಾಡಲು ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರತಿ ವರ್ಷ ರೂ.5000.00ಕೋಟಿಗಳನ್ನು ನೀಡುವುದರ ಮೂಲಕ ಉತ್ತರ ಕರ್ನಾಟಕದ ಅಭಿವೃದ್ಧಿಗೆ ರಾಜ್ಯ ಸರ್ಕಾರವು ಪೂರಕವಾದಂತಹ ಎಲ್ಲಾ ಸಹಕಾರವನ್ನು ನೀಡಲಾಗುತ್ತಿದೆ.

ಪ್ರಸ್ತುತ ರಾಜ್ಯ ಸರ್ಕಾರವು ಡಾ: ಡಿ.ಎಂ ನಂಜುಂಡಪ್ಪ ವರದಿಯ ಸೂಚ್ಯಾಂಕಗಳು 22 ವರ್ಷಗಳಷ್ಟು ಹಳೆಯಾದಾಗಿರುವುದರಿಂದ ಹಾಗೂ ಕೆಲವು ಸೂಚ್ಯಾಂಕಗಳು ಮಹತ್ವ ಕಳೆದುಕೊಂಡಿರುವುದರಿಂದ ಹೊಸ ಅಭಿವೃದ್ಧಿ ಸೂಚ್ಯಾಂಕಗಳನ್ನು ಕಂಡು ಹಿಡಿಯಲು ಪ್ರೊ. ಎಂ ಗೋವಿಂದರಾವ್, ಆರ್ಥಿಕ ತಜ್ಞರು ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ನೀಡುವ ಶಿಫಾರಸ್ಸುಗಳನ್ನು ಆಧರಿಸಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಬೇಕಾದ ಪೂರಕ ಯೋಜನೆಗಳನ್ನು ರೂಪಿಸಲು ಕ್ರಮವಹಿಸಲಾಗುತ್ತದೆ ಎಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**(ಡಿ. ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.

## ಅನುಬಂಧ-1

**ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ, ಕಲಬುರ್ಗಿ ವಿಭಾಗದಲ್ಲಿ ಅನುಷ್ಠಾನಗೊಂಡ ಪ್ರಮುಖ ಕಾರ್ಯಗಳ ವಿವರಗಳು**

- ಕಲಬುರಗಿಯಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಾಗಿದೆ.
- ಕಲಬುರಗಿಯಲ್ಲಿ ಉಚ್ಚ ನ್ಯಾಯಾಲಯ ಪೀಠಗಳ ಸ್ಥಾಪನೆ ಮಾಡಲಾಗಿದೆ.
- ವಿಜಯಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ.
- ಕಲಬುರಗಿ ಮತ್ತು ಹುಬ್ಬಳ್ಳಿಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ (ಐಟಿ ಪಾರ್ಕ್)ನ್ನು ಸ್ಥಾಪನೆ ಮಾಡಲಾಗಿದೆ.
- ಕಲಬುರಗಿಯಲ್ಲಿ ಫುಡ್ ಪಾರ್ಕ್ ಸ್ಥಾಪನೆ ಮಾಡಲಾಗಿದೆ.
- ಕಲಬುರಗಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ ಕೆಲಸ ಪ್ರಗತಿಯಲ್ಲಿದೆ.
- ಕಲಬುರಗಿಯಲ್ಲಿ ವಿಮಾನ ನಿಲ್ದಾಣವನ್ನು ಸ್ಥಾಪನೆ ಮಾಡಲಾಗಿದೆ.
- ಬೀದರ್ ಜಿಲ್ಲೆಯಲ್ಲಿಯೂ ಸಹ ವಿಮಾಣ ನಿಲ್ದಾಣ ಸ್ಥಾಪನೆಯಾಗಿದೆ ಹಾಗೂ 2024-25ನೇ ಸಾಲಿನಲ್ಲಿ ರೂ.18.00 ಕೋಟಿ ನೀಡಲಾಗಿದೆ.
- ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ರಾಯಚೂರು, ಬೆಳಗಾವಿ ಮತ್ತು ಬೀದರನಲ್ಲಿ ಸ್ಥಾಪನೆ ಮಾಡಲಾಗಿದೆ.
- ಹೊಸದಾಗಿ 38 ಸುಟ್ಟಗಾಯಗಳ ಮತ್ತು ಡಯಾಲಿಸಿಸ್ ವಾರ್ಡ್‌ಗಳನ್ನು ತೆರೆಯಲಾಗಿದೆ.
- ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಹಾಗೂ ಬೀದರನಲ್ಲಿ ತೋಟಗಾರಿಕೆ ಕಾಲೇಜನ್ನು ಸ್ಥಾಪನೆ ಮಾಡಲಾಗಿದೆ.
- ಕೃಷಿ ಬೆಲೆಯನ್ನು ಬೆಂಬಲಿಸಲು ಆವರ್ತಕ ನಿಧಿಯನ್ನು ಸ್ಥಾಪನೆ ಮಾಡಲಾಗಿದೆ.
- ಹುಬ್ಬಳ್ಳಿ-ಮುಂಬೈ ವಿಮಾನಯಾನ ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.
- ಬೀದರನಲ್ಲಿ ಕರ್ನಾಟಕ ಪಶುವೈದ್ಯ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಲಾಗಿದೆ.
- ಕಲಬುರಗಿಯಲ್ಲಿ ಹೈನುಗಾರಿಕೆ ವಿಜ್ಞಾನ ಕಾಲೇಜನ್ನು ಸ್ಥಾಪಿಸಲಾಗಿದೆ.
- ಎಲ್ಲಾ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಕಸ್ತೂರ ಬಾ ಗಾಂಧಿ ಬಾಲಕಿಯರ ಶಾಲೆಗಳನ್ನು ಸ್ಥಾಪಿಸಲಾಗಿದೆ.

- ಜಿಲ್ಲಾ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ವಾರ್ಡ್‌ಗಳನ್ನು ಸ್ಥಾಪಿಸಲಾಗಿದೆ.
- ಬೀದರ್-ಕಲಬುರಗಿ ರೈಲು ಮಾರ್ಗ, ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.
- ರೈತ ತರಬೇತಿ ಕೇಂದ್ರಗಳನ್ನು ಕೃಷಿ ಇಲಾಖಾ ವತಿಯಿಂದ ಸ್ಥಾಪಿಸಲಾಗಿರುತ್ತದೆ.
- ಹೊಸ ಪಶುಪಾಲನ ಕೇಂದ್ರಗಳು ಸ್ಥಾಪನೆಯಾಗಿರುತ್ತವೆ.
- ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವುಳ್ಳ ಎಪಿಎಂಸಿ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿರುತ್ತದೆ.
- ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ ಮನೆಗಳನ್ನು ನಿರ್ಮಿಸಲಾಗಿರುತ್ತದೆ ಹಾಗೂ ಸೈಟುಗಳನ್ನು ವಿತರಣೆ ಮಾಡಲಾಗಿದೆ.
- ರಾಜ್ಯದಲ್ಲಿ 53 ಮೆಡಿಕಲ್ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದು, ಖಾಸಗಿ ಅಥವಾ ಸರ್ಕಾರಿ ಕಾಲೇಜುಗಳು ಇಲ್ಲದಿರುವ ಜಿಲ್ಲೆಗಳೆಂದರೆ ಹಾವೇರಿ, ಯಾದಗಿರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಜಿಲ್ಲಾ ಆಸ್ಪತ್ರೆಗಳನ್ನು ಉನ್ನತೀಕರಿಸಲು ಭೂಮಿಯನ್ನು ಗುರುತಿಸಿದ್ದು, ಈ ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಆಧ್ಯತೆಯ ಮೇಲೆ ಸ್ಥಾಪಿಸಲಾಗಿದೆ.

ಉತ್ತರ ಕರ್ನಾಟಕದ ತಾಲ್ಲೂಕುಗಳಲ್ಲಿ ಈ ಕೆಳಕಂಡ ಪ್ರಮುಖ ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದಂತೆ ಇಲಾಖಾವಾರು ಅಭಿವೃದ್ಧಿ ಕಾಮಗಾರಿಗಳನ್ನು ಹಿಂದುಳಿದ ತಾಲ್ಲೂಕುಗಳಿಗೆ ಅನುದಾನ ಹಂಚಿಕೆಯಾದ ವಿವರ

**ಮೂಲ ಸೌಕರ್ಯ ಯೋಜನೆಯಡಿ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಕೈಗೊಂಡ ಕಾಮಗಾರಿಗಳು**

- ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕಾಮಗಾರಿಗಳನ್ನು 2013-14ನೇ ಸಾಲಿನಲ್ಲಿ ರಾಯಚೂರು ಮತ್ತು ವಿಜಯಪುರ ಜಿಲ್ಲೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಹಂಚಿಕೆ ಮಾಡಲಾಗಿದೆ.
- ಬೀದರ್ ಗುಲ್ಬರ್ಗಾ, ಬಾಗಲಕೋಟೆ, ಬೆಳಗಾವಿ, ಹಾವೇರಿ, ಬಳ್ಳಾರಿ, ಕೊಪ್ಪಳ, ಗದಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೊಸ ರೈಲು ಮಾರ್ಗ ಯೋಜನೆಗೆ ಅನುದಾನ ಹಂಚಿಕೆ ಮಾಡಲಾಗಿದೆ.
- ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ, KRIDE ಮೇಲುಸೇತುವೆ/ಕೆಳಸೇತುವೆ ಯೋಜನೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ.

**ಪ್ರವಾಸೋದ್ಯಮ ಇಲಾಖೆಯಡಿ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಕೈಗೊಂಡ ಕಾಮಗಾರಿಗಳು**

- ಬೆಳಗಾವಿ, ಉತ್ತರ ಕನ್ನಡ, ಗದಗ, ಧಾರವಾಡ, ಹಾವೇರಿ, ಬಾಗಲಕೋಟೆ, ವಿಜಯಪುರ, ಕಲಬುರ್ಗಿ, ರಾಯಚೂರು, ಬೀದರ್, ಯಾದಗಿರಿ, ಬಳ್ಳಾರಿ ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಮೂಲಭೂತ ಸೌಕರ್ಯಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಒದಗಿಸಲಾಗಿದೆ.

**ಲೋಕೋಪಯೋಗಿ ಇಲಾಖೆಗೆ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಕೈಗೊಂಡ ಕಾಮಗಾರಿಗಳು**

- ಧಾರವಾಡ, ಗದಗ, ಬೆಳಗಾವಿ, ಧಾರವಾಡ, ಹಾವೇರಿ, ಉತ್ತರಕನ್ನಡ, ವಿಜಯಪುರ, ಬಾಗಲಕೋಟೆ ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಕಾಂಕ್ರಿಟ್ ರಸ್ತೆ, ಚರಂಡಿ ಕಾಮಗಾರಿಗಳಿಗೆ, ಸಿ.ಸಿ. ರಸ್ತೆ, ಡಾಂಬರಿಕರಣ ಮಾಡಿ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ರಾಜ್ಯ ಹೆದ್ದಾರಿಯ ರಸ್ತೆ, ಜಿಲ್ಲಾ ಮತ್ತ ಇತರೆ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಒದಗಿಸಲಾಗಿದೆ.

**ಸಾರಿಗೆ ಇಲಾಖೆಗೆ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಕೈಗೊಂಡ ಕಾಮಗಾರಿಗಳು**

ಉತ್ತರ ಕರ್ನಾಟಕದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಬಸ್ ನಿಲ್ದಾಣ ಇಲ್ಲದೆ ಇರುವ ಸ್ಥಳಗಳಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು, ಇರುವಂತಹ ಬಸ್ ನಿಲ್ದಾಣಗಳು ಹಾಳಾಗಿದ್ದಲ್ಲಿ ನವೀಕರಿಸಲು, ಬಸ್ ನಿಲ್ದಾಣದ ಆವರಣ ಗೋಡೆ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಿಸುವುದು, ಬಸ್ ನಿಲ್ದಾಣದಲ್ಲಿ ನಿರ್ಮಲ ಮಾದರಿಯ ಶೌಚಲಾಯ ವ್ಯವಸ್ಥೆ ಮತ್ತು ಮಹಿಳೆಯರಿಗೆ ವಿಶ್ರಾಂತಿ ಕೊಠಡಿ ನಿರ್ಮಿಸವುದು ಮತ್ತು ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಒದಗಿಸಲಾಗಿದೆ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ 2007-08 ರಲ್ಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC) ಗಳನ್ನು ಚಿಕ್ಕೋಡಿ, ಗೋಕಾಕ್,, ಕೊಪ್ಪಳ, ಯಾದಗಿರಿ, ಹಾವೇರಿ, ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ. 2024-25ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಕಲಬುರ್ಗಿ ಮತ್ತು ಕೊಪ್ಪಳ ಜಿಲ್ಲೆಯಲಿ ಜಿ.ಟಿ.ಟಿ.ಸಿ ತರಬೇತಿ ಕೇಂದ್ರ ಗಳನ್ನು ಸ್ಥಾಪಿಸಲಾಗಿದೆ. 2025-26ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಇಂಡಿ, ಕಂಪ್ಲಿ, ಸಿಂಧನೂರು ಮತ್ತು ರಾಯಚೂರಿ ನಲ್ಲಿ ಜಿ.ಟಿ.ಟಿ.ಸಿ ತರಬೇತಿ ಕೇಂದ್ರ ಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.

## ಅನುಬಂಧ-2

**ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ, ಬೆಳಗಾವಿ ವಿಭಾಗದಲ್ಲಿ, ಅನುಷ್ಠಾನಗೊಂಡ ಪ್ರಮುಖ ಯೋಜನೆ / ಕಾರ್ಯಕ್ರಮಗಳ ವಿವರಗಳು**

- ಧಾರವಾಡದಲ್ಲಿ ಉಚ್ಚ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ.
- ಬೆಳಗಾವಿ ವಿಭಾಗದ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಕಸ್ತೂರ ಬಾ ಗಾಂಧಿ ಬಾಲಕಿಯರ ಶಾಲೆಗಳನ್ನು ಸ್ಥಾಪಿಸಲಾಗಿದೆ.
- ವಿಜಯಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ.
- ಹುಬ್ಬಳ್ಳಿಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ (ಐಟಿ ಪಾರ್ಕ್)ನ್ನು ಸ್ಥಾಪಿಸಲಾಗಿದೆ.
- ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ ಮನೆಗಳ ನಿರ್ಮಾಣ.
- ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಶಿಕ್ಷಕರ ವಸತಿ ಗೃಹ, ಕ್ಲಸ್ಟರ್ ಕಾಂಪ್ಲೆಕ್ಸ್ ನಿರ್ಮಾಣ.
- ವಿಜಯಪುರದಲ್ಲಿ ಸಣ್ಣ ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.
- ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಬೆಳಗಾವಿಯಲ್ಲಿ ಸ್ಥಾಪಿಸಲಾಗಿದೆ.
- ಬಾಗಲಕೋಟೆ, ಬೆಳಗಾವಿ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಹೊಸ ರೈಲು ಮಾರ್ಗ ಯೋಜನೆಗೆ ಅನುದಾನ ಹಂಚಿಕೆ ಮಾಡಲಾಗಿದೆ.
- ಧಾರವಾಡದಲ್ಲಿ ಮಾನಸಿಕ ರೋಗಿಗಳ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆ.
- ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಹಾಗೂ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲಾಗಿದೆ.
- ಕೃಷಿ ಬೆಲೆಯನ್ನು ಬೆಂಬಲಿಸಲು ಆವರ್ತಕ ನಿಧಿಯನ್ನು ಸ್ಥಾಪನೆ.
- ಹುಬ್ಬಳ್ಳಿ-ಮುಂಬೈ ವಿಮಾನಯಾನ ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.
- ಜಿಲ್ಲಾ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ವಾರ್ಡ್‌ಗಳನ್ನು ಸ್ಥಾಪಿಸಲಾಗಿದೆ.
- ಹೊಸ ಪಶುಪಾಲನ ಕೇಂದ್ರಗಳು ಸ್ಥಾಪಿಸಲಾಗಿದೆ.
- ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವುಳ್ಳ ಎಪಿಎಂಸಿ ಮಾರುಕಟ್ಟೆಗಳ ಸ್ಥಾಪನೆ.
- ರಾಜ್ಯದಲ್ಲಿ ಖಾಸಗಿ ಅಥವಾ ಸರ್ಕಾರಿ ಕಾಲೇಜುಗಳು ಇಲ್ಲದಿರುವ ಜಿಲ್ಲೆಗಳಾದ ಹಾವೇರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಜಿಲ್ಲಾ ಆಸ್ಪತ್ರೆಗಳನ್ನು ಉನ್ನತೀಕರಿಸಲು ಭೂಮಿಯನ್ನು

ಗುರುತಿಸಿದ್ದು, ಈ ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಆದ್ಯತೆಯ ಮೇಲೆ ಸ್ಥಾಪಿಸಲು ಕ್ರಮವಹಿಸಿದೆ.

- ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ, ಬೆಳಗಾವಿ, ಉತ್ತರ ಕನ್ನಡ, ಗದಗ, ಧಾರವಾಡ, ಹಾವೇರಿ, ಬಾಗಲಕೋಟೆ, ವಿಜಯಪುರ ತಾಲ್ಲೂಕುಗಳಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಮೂಲಭೂತ ಸೌಕರ್ಯಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಒದಗಿಸಲಾಗಿದೆ.

ಉತ್ತರ ಕರ್ನಾಟಕದ ತಾಲ್ಲೂಕುಗಳಲ್ಲಿ ಈ ಕೆಳಕಂಡ ಪ್ರಮುಖ ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದಂತೆ ಇಲಾಖಾವಾರು ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರ

**ಮೂಲ ಸೌಕರ್ಯ ಯೋಜನೆಯಡಿ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಕೈಗೊಂಡ ಕಾಮಗಾರಿಗಳು**

- ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕಾಮಗಾರಿಗಳನ್ನು 2013-14ನೇ ಸಾಲಿನಲ್ಲಿ ರಾಯಚೂರು ಮತ್ತು ವಿಜಯಪುರ ಜಿಲ್ಲೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಹಂಚಿಕೆ ಮಾಡಲಾಗಿದೆ.
- ಬೀದರ್ ಗುಲ್ಬರ್ಗಾ, ಬಾಗಲಕೋಟೆ, ಬೆಳಗಾವಿ, ಹಾವೇರಿ, ಬಳ್ಳಾರಿ, ಕೊಪ್ಪಳ, ಗದಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೊಸ ರೈಲು ಮಾರ್ಗ ಯೋಜನೆಗೆ ಅನುದಾನ ಹಂಚಿಕೆ ಮಾಡಲಾಗಿದೆ.
- ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ, KRIDE ಮೇಲುಸೇತುವೆ/ಕೆಳಸೇತುವೆ ಯೋಜನೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ.

**ಪ್ರವಾಸೋದ್ಯಮ ಇಲಾಖೆಯಡಿ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಕೈಗೊಂಡ ಕಾಮಗಾರಿಗಳು**

- ಬೆಳಗಾವಿ, ಉತ್ತರ ಕನ್ನಡ, ಗದಗ, ಧಾರವಾಡ, ಹಾವೇರಿ, ಬಾಗಲಕೋಟೆ, ವಿಜಯಪುರ, ಕಲಬುರ್ಗಿ, ರಾಯಚೂರು, ಬೀದರ್, ಯಾದಗಿರಿ, ಬಳ್ಳಾರಿ ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಮೂಲಭೂತ ಸೌಕರ್ಯಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಒದಗಿಸಲಾಗಿದೆ.

**ಲೋಕೋಪಯೋಗಿ ಇಲಾಖೆಗೆ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಕೈಗೊಂಡ ಕಾಮಗಾರಿಗಳು**

- ಧಾರವಾಡ, ಗದಗ, ಬೆಳಗಾವಿ, ಧಾರವಾಡ, ಹಾವೇರಿ, ಉತ್ತರಕನ್ನಡ, ವಿಜಯಪುರ, ಬಾಗಲಕೋಟೆ ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಕಾಂಕ್ರಿಟ್ ರಸ್ತೆ, ಚರಂಡಿ ಕಾಮಗಾರಿಗಳಿಗೆ, ಸಿ.ಸಿ. ರಸ್ತೆ, ಡಾಂಬರಿಕರಣ ಮಾಡಿ ರಸ್ತೆಗಳನ್ನು ಅಭಿವೃದ್ದಿ ಪಡಿಸುವುದು ರಾಜ್ಯ ಹೆದ್ದಾರಿಯ ರಸ್ತೆ, ಜಿಲ್ಲಾ ಮತ್ತ ಇತರೆ ರಸ್ತೆಗಳನ್ನು ಅಭಿವೃದ್ದಿ ಪಡಿಸಲು ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಒದಗಿಸಲಾಗಿದೆ.

**ಸಾರಿಗೆ ಇಲಾಖೆಗೆ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಕೈಗೊಂಡ ಕಾಮಗಾರಿಗಳು**

- ಉತ್ತರ ಕರ್ನಾಟಕದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಬಸ್ ನಿಲ್ದಾಣ ಇಲ್ಲದೆ ಇರುವ ಸ್ಥಳಗಳಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು, ಇರುವಂತಹ ಬಸ್ ನಿಲ್ದಾಣಗಳು ಹಾಳಾಗಿದ್ದಲ್ಲಿ ನವೀಕರಿಸಲು, ಬಸ್ ನಿಲ್ದಾಣದ ಆವರಣ ಗೋಡೆ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಿಸುವುದು, ಬಸ್ ನಿಲ್ದಾಣದಲ್ಲಿ ನಿರ್ಮಲ ಮಾದರಿಯ ಶೌಚಲಾಯ ವ್ಯವಸ್ಥೆ ಮತ್ತು ಮಹಿಳೆಯರಿಗೆ ವಿಶ್ರಾಂತಿ ಕೊಠಡಿ ನಿರ್ಮಿಸವುದು ಮತ್ತು ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಒದಗಿಸಲಾಗಿದೆ

ಅನುಬಂಧ- 3

## 2013-14 ರಿಂದ 2018-19 ರ ವರೆಗಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಪ್ರಮುಖವಾಗಿ ಕೈಗೊಂಡಿರುವ ಕಾಮಗಾರಿಗಳ ವಿವರ.

| [illegible] | [illegible] | [illegible] | [illegible] ವಿವರ | [illegible] |
|---|---|---|---|---|
| 1 | 2014-15, 2017-18 & 2018-19 | ಕಲಬುರಗಿ | ಕಲಬುರಗಿ ವಿಮಾನ ನಿಲ್ದಾಣ ಕಾಮಗಾರಿ | 58.52 |
| 2 | 2014-15 | ಬೀದರ | ಬೀದರ ರಿಂಗ್ ರೋಡ್ ನಿರ್ಮಾಣ | 49.75 |
| 3 | 2018-19 | ಕ.ಕ. ಪ್ರದೇಶ | ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗಳ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಿಕ್ಷಣ ಇಲಾಖೆಯ TALP ಯೋಜನೆಯ ಕಾರ್ಯಕ್ರಮದಅನುಷ್ಠಾನಗೊಳಿಸುವುದು. | 49.47 |
| 4 | 2015-16, 2016-17, 2017-18 | ಕೊಪ್ಪಳ | ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ತಳಕಲ್ ಇಂಜಿನಿಯರಿಂಗ್ ಕಾಲೇಜುನಿರ್ಮಾಣ | 49.00 |
| 5 | 2015-16 | ಕಲಬುರಗಿ | ಕಲಬುರಗಿ ನಗರದ 4ನೇ ಹಂತದ ಒಳಚರಂಡಿ ಯೋಜನೆ | 30.00 |
| 6 | 2018-19, 2019-20, 2020-21, 2021-22 &2022-23 | ರಾಯಚೂರು | ದೇವದುರ್ಗ ಪಟ್ಟಣದಲ್ಲಿ ನೂತನ ಇಂಜಿನೀಯರಿಂಗ್ ಕಾಲೇಜು ಕಟ್ಟಡ ನಿರ್ಮಾಣ. | 29.00 |
| 7 | 2018-19 | ಕ.ಕ.ಪ್ರದೇಶ | ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರ ಸ್ಥಾಪನೆ | 18.75 |
| 8 | 2016-17 & 2019-20 | ಕಲಬುರಗಿ | ಅಫಜಲಪೂರ ತಾಲೂಕಿನ ಬಾದನಹಳ್ಳಿದಿಂದ ಗೌಡಗಾಂವ (ಜಿ.ಮು.ರ)ರ ರಸ್ತೆ ಕಿಮೀ 0.00 ರಿಂದ 9.60ರ ವರೆಗೆ ರಸ್ತೆ ಸುಧಾರಣೆ | 10.97 |
| 9 | 2015-16 | ಯಾದಗಿರಿ | ಯಾದಗಿರಿ ಜಿಲ್ಲೆಯ ಸೈದಾಪುರ್ ದಿಂದ ಅಜಲಾಪುರ್ ವರೆಗೆ ರಸ್ತೆ ನಿರ್ಮಾಣ | 8.84 |
| 10 | 2014-15 | ಕಲಬುರಗಿ | ಕಲಬುರಗಿಯ ಮೋಹನ್ ಲಾಡ್ಜ್ ದಿಂದ ರೈಲ್ವೆ ಕೆಳ ಸೇತುವೆಮೂಲಕ ರಾಮಮಂದಿರದವರೆಗೆ ರಸ್ತೆ ನಿರ್ಮಾಣ. | 8.66 |
| 11 | 2014-15, 2015-16 & 2016-17 | ಕ.ಕ.ಪ್ರದೇಶ | ಸ್ಮಾರ್ಟ್ ಪೋಲಿಸ್ ಅಡಿಯಲ್ಲಿ ಪೋಲಿಸ್ ಭದ್ರತಾ ಸುದಾರಣೆಗಾಗಿ ಸಾಮಗ್ರಿ ಸಲಕರಣೆಗಳನ್ನು ಪೂರೈಸಲಾಗಿದೆ. | 8.62 |

# 2013-14 ರಿಂದ 2018-19 ರ ವರೆಗಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಪ್ರಮುಖವಾಗಿ ಕೈಗೊಂಡಿರುವ ಕಾಮಗಾರಿಗಳ ವಿವರ.

| | | | | |
|---|---|---|---|---|
| 12 | 2016-17 | ಕಲಬುರಗಿ | ಆಳಂದ ತಾಲೂಕಿನಲ್ಲಿ ಆಳಂದದಿಂದ ನಿಂಬರ್ಗಾ ಗ್ರಾಮಕ್ಕೆ (ಬಸ್ನೂರು ಕ್ರಾಸ್) 3.00 ರಿಂದ 9.285 ಕಿ.ಮೀ ಉದ್ದದ ರಸ್ತೆ ನಿರ್ಮಾಣ | 8.48 |
| 13 | 2014-15 | ರಾಯಚೂರು | ಅರಕೇರಾ ಸಿರವಾರ ಮುಖ್ಯರಸ್ತೆಯಿಂದ ವಾಯ ಜಾಡಲದಿನ್ನಿ, ನಾಗಡದಿನ್ನಿ, ತಿಪ್ಪಲದಿನ್ನಿ ಯಿಂದ ಸಿರವಾರ ರಾಯಚೂರು ಮುಖ್ಯರಸ್ತೆಯವರೆಗೆ ಸಿ.ಡಿ ಹಾಗೂ ರಸ್ತೆ ನಿರ್ಮಾಣ 12 ಕಿ.ಮೀ. | 8.00 |
| 14 | 2015-16 & 2019-20 | ಯಾದಗಿರಿ | ಯಾದಗಿರಿಯಲ್ಲಿ ಹೈಟೆಕ್ ಜವಳಿ ತರಬೇತಿ ಕೇಂದ್ರ (ಕಟ್ಟಡ ಮತ್ತು ಸಸ್ಯ ಮತ್ತು ಯಂತ್ರೋಪಕರಣಗಳು) | 7.52 |
| 15 | 2018-19 | ಕಲಬುರಗಿ | ಕಲಬುರಗಿ ಜಿಲ್ಲೆಯಲ್ಲಿ ಸರಕಾರಿ ಬುದ್ದಿಮಾಂದ್ಯ ಬಾಲಕಿಯರ ಬಾಲ ಮಂದಿರ ಕಟ್ಟಡ (6 ರಿಂದ 18 ವರ್ಷದವರಗೆ) ನಿರ್ಮಾಣ ಕಾಮಗಾರಿ. | 6.82 |
| 16 | 2017-18 | ಕೊಪ್ಪಳ | ಬೂದುಗುಂಪಾದಿಂದ ನಂದಿಹಳ್ಳಿವರೆಗೆ ರಸ್ತೆ ಡಾಂಬರೀಕರಣ 1.50 ರಿಂದ 10.92 ಕಿ.ಮೀ (ವಿ.ಆರ್ 11) | 6.30 |
| 17 | 2017-18 | ಬಳ್ಳಾರಿ | ಬಳ್ಳಾರಿ ಜಿಲ್ಲೆಯ ವಿಮ್ಸ್ (VIMS)ಗೆ ಎಂ.ಆರ್.ಐ.ಸ್ಕ್ಯಾನಿಂಗ್ಯಂತ್ರ ಉಪಕರಣಗಳನ್ನು ಒದಗಿಸುವುದು, | 6.00 |
| 18 | 2017-18 | ಕ.ಕ.ಪ್ರದೇಶ | ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗೆ ತಲಾ ಒಂದು ಸಂಚಾರಿ ತಾರಾಲಯ ಒದಗಿಸುವುದು (1 ಕೋಟಿ) | 6.00 |
| 19 | 2014-15 | ರಾಯಚೂರು | ರಾಯಚೂರು ನಗರದಲ್ಲಿ 12.50 ಎಂ.ಎಲ್.ಡಿ. ಸಾಮರ್ಥ್ಯದ ಡಬ್ಲ್ಯೂಟಿಪಿ ನಿರ್ಮಾಣ. | 5.36 |
| 20 | 2018-19 | ಕ.ಕ.ಪ್ರದೇಶ | 4387 ಹಿಪ್ರಾಶಾ ಮತ್ತು 1130 ಪ್ರೌಢ ಶಾಲೆಗಳಿಗೆ ವಿಜ್ಞಾನ ಮತ್ತು ಗಣಿತಕಿಟುಗಳನ್ನು ಒದಗಿಸಲಾಗಿದೆ. | 5.29 |
| 21 | 2017-18 | ಬೀದರ | ಬೀದರ್ ಜಿಲ್ಲಾ ಕ್ರೀಡಾಂಗಣ ಸಂಬಂಧಿತ ಕಾಮಗಾರಿಗಳು | 5.00 |
| 22 | 2017-18 | ಬೀದರ | ಸರ್ಕಾರಿ ನರ್ಸಿಂಗ್ ಶಾಲೆ (Govt Nursing School) ಬೀದರ ಕಾಲೇಜು ಕಟ್ಟಡ ಹಾಗೂ ವಿದ್ಯಾರ್ಥಿಗಳ ವಸತಿ ನಿಲಯ ನಿರ್ಮಾಣಕ್ಕಾಗಿ. | 4.90 |
| 23 | 2017-18 | ಬಳ್ಳಾರಿ | ಬಳ್ಳಾರಿ ಜಿಲ್ಲೆಯ ವಿಜಯ ನಗರ ವಿಶ್ವವಿದ್ಯಾಲಯದಲ್ಲಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದು. | 4.84 |
| 24 | 2018-19 | ಬಳ್ಳಾರಿ | ನಂದಿಹಳ್ಳಿ ಗ್ರಾಮದ ಸ್ನಾತಕೋತ್ತರ ಕೇಂದ್ರಕ್ಕೆ 100 ವಿದ್ಯಾರ್ಥಿನಿಯರ ವಸತಿನಿಲಯದ ಕಟ್ಟಡ ಕಾಮಗಾರಿ . | 4.36 |
| 25 | 2018-19 | ಕೊಪ್ಪಳ | ಕುಕನೂರ ತಾಲ್ಲೂಕಿನ ಮಸಬಹಂಚಿನಾಳ ಗ್ರಾಮದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಸಿಸಿ ರಸ್ತೆ ಹಾಗೂ ಚರಂಡಿನಿರ್ಮಾಣ. | 4.15 |
| 26 | 2018-19 | ವಿಜಯನಗರ | ಹಡಗಲಿ ಪಟ್ಟಣದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣ. | 3.66 |
| 27 | 2017-18 | ಬೀದರ | ಬೀದರ ವೈದ್ಯಕೀಯ ಕಾಲೇಜಿಗೆ ಎಂ.ಆರ್.ಐ ಸ್ಕ್ಯಾನಿಂಗ್ ಯಂತ್ರ. | 3.00 |
| 28 | 2014-15 | ಯಾದಗಿರಿ | ಶಹಾಪುರ ಪಟ್ಟಣದ ಬಸವೇಶ್ವರ ಚೌಕನಿಂದ ಯಾದಗಿರಿಗೆ ಹೋಗುವ ರಸ್ತೆಹಾಗೂ ಬ್ರಿಡ್ಜ್ ನಿರ್ಮಾಣ ಕಾಮಾಗಾರಿ. | 2.50 |
| 29 | 2017-18 | ಕೊಪ್ಪಳ | ಕೊಪ್ಪಳ ನಗರದಲ್ಲಿ ಜಿಲ್ಲಾ ಗ್ರಂಥಾಲಯ ನಿರ್ಮಾಣ | 2.50 |

# 2019-20 ರಿಂದ 2024-25ರ ವರೆಗಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿಮಂಡಳಿಯಿಂದ ಪ್ರಮುಖವಾಗಿ ಕೈಗೊಂಡಿರುವ ಕಾಮಗಾರಿಗಳ ವಿವರ.

| | | | [illegible] | |
|---|---|---|---|---|
| 1 | 2023-24 & 2024-25 | ಕ ಕ.ಪ್ರದೇಶ | ಅಕ್ಷರ ಅವಿಷ್ಕಾರ ಯೋಜನೆಗೆ ನಿಗದಿಪಡಿಸಿದ ಅನುದಾನ | 1176.56 |
| 2 | 2019-20 to 2024-25 | ಕ.ಕ.ಪ್ರದೇಶ | ಕ.ಕ.ಪ್ರ.ಅ.ಮಂಡಳಿಯ 7 ಜಿಲ್ಲೆಗಳಲ್ಲಿ ರೂ. 5 ಕೋಟಿಗಳಿಗಿಂತ ಮೇಲ್ಪಟ್ಟ ರಸ್ತೆ ಮತ್ತು ಸಂಪರ್ಕ ವಲಯದ 124 ಕಾಮಗಾರಿಗಳಿಗೆ ಒದಗಿಸಲಾದ ಅನುದಾನ | 881.20 |
| 3 | 2024-25 | ಕ.ಕ.ಪ್ರದೇಶ | ಕಲ್ಯಾಣಪಥ | 292.88 |
| 4 | 2019-20,2020-21, 2022-23, 2023-24 & 2024-25 | ಕಲಬುರಗಿ | ಕಲಬುರಗಿಯಲ್ಲಿ ಜಯದೇವ ಆಸ್ಪತ್ರೆ ನಿರ್ಮಾಣ. | 244.80 |
| 5 | 2022-23 | ಕ.ಕ.ಪ್ರದೇಶ | ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆ ಅಡಿ ಕ.ಕ.ಪ್ರದೇಶದ 7 ಜಿಲ್ಲೆಗಳಲ್ಲಿ 18 ವಿದ್ಯಾರ್ಥಿ ನಿಲಯಗಳ, 4 ವಸತಿ ಶಾಲೆಗಳ ಮತ್ತು 5 ಕ್ರೈಸ್ ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿ. | 204.00 |
| 6 | 2022-23 | ಕ.ಕ.ಪ್ರದೇಶ | ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ 1105 ಶಾಲೆ ಕೋಣೆಗಳ ನಿರ್ಮಾಣ | 158.69 |
| 7 | 2024-25 | ಕ.ಕ.ಪ್ರದೇಶ | ಆರೋಗ್ಯ ಅವಿಷ್ಕಾರ ಯೋಜನೆಗೆ ನಿಗದಿಪಡಿಸಿದ ಅನುದಾನ | 151.43 |
| 8 | 2023-24 & 2024-25 | ಕ.ಕ.ಪ್ರದೇಶ | ತಾಲೂಕಾ ಆಡಳಿತ ಭವನ | 137.60 |
| 9 | 2023-24 & 2024-25 | ಕ.ಕ.ಪ್ರದೇಶ | ಕಲಬುರಗಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಜಿ.ಟಿ.ಟಿ.ಸಿ ಬಹು ಕೌಶಲ್ಯಾಭಿವೃದ್ಧಿ ಕೇಂದ್ರಗಳು ನಿಗದಿಪಡಿಸಿದ ಅನುದಾನ | 120.00 |
| 10 | 2022-23 | ಕ.ಕ.ಪ್ರದೇಶ | ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗೆ 553 ಅಂಗನವಾಡಿ ನಿರ್ಮಾಣ | 98.14 |
| 11 | 2022-23 & 2023-24 | ಕ.ಕ.ಪ್ರದೇಶ | ಸಾರಿಗೆ | 90.00 |
| 12 | 2024-25 | ಕ.ಕ.ಪ್ರದೇಶ | ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಸತಿ ನಿಲಯ/ ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಗಳು. | 75.24 |
| 13 | 2024-25 | ಕ.ಕ.ಪ್ರದೇಶ | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹೊಸ ವಸತಿ ನಿಲಯಗಳ ನಿರ್ಮಾಣ. | 75.00 |
| 14 | 2024-25 | ಕ.ಕ.ಪ್ರದೇಶ | ವೈದ್ಯಕೀಯ ಶಿಕ್ಷಣ . | 62.20 |

## 2019-20 ರಿಂದ 2024-25 ರ ವರೆಗಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿಮಂಡಳಿಯಿಂದ ಪ್ರಮುಖವಾಗಿ ಕೈಗೊಂಡಿರುವ ಕಾಮಗಾರಿಗಳ ವಿವರ.

| | | | | |
|---|---|---|---|---|
| 15 | 2020-21, 2022-23 & 2023-24 | ಕ.ಕ.ಪ್ರದೇಶ | ಕಲ್ಯಾಣ ಕರ್ನಾಟಕ ಭಾಗದ ಉದ್ಯೋಗ ಆಕಾಂಕ್ಷಿಗಳು ತರಬೇತಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಭಾಗವಹಿಸಲು ಬೆಂಗಳೂರಿಗೆ ಬರುವಾಗ ತಂಗಲು ಅನುಕೂಲವಾಗುವ ದೃಷ್ಠಿಯಿಂದ ಬೆಂಗಳೂರಿನ ಹೆಚ್‌ಎಸ್‌ಆರ್ ಬಡಾವಣೆಯಲ್ಲಿ ಹಾಸ್ಟಲ್ ಹಾಗೂ ಆಡಳಿತ ಕಛೇರಿ ಕಟ್ಟಡ ನಿರ್ಮಾಣ. | 59.00 |
| 16 | 2020-21 & 2022-23 | ರಾಯಚೂರು | ರಾಯಚೂರು ವಿಮಾನ ನಿಲ್ದಾಣ ಕಾಮಗಾರಿ. | 54.56 |
| 17 | 2024-25 | ಕಲಬುರಗಿ | ಮೆಗಾ ಟೆಕ್ಸ್ ಟೈಲ್ ಪಾರ್ಕ್, ಕಲಬುರಗಿ. | 50.90 |
| 18 | 2021-22 | ಕ.ಕ.ಪ್ರದೇಶ | ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿಸಂಸ್ಥೆಗಳಲ್ಲಿ ಟಾಟಾ Technologies Lab ಮತ್ತು ಕಾರ್ಯಾಗಾರದ ವಿವರ. | 48.92 |
| 19 | 2023-24 | ರಾಯಚೂರು | ರಾಯಚೂರು ವಿಶ್ವವಿದ್ಯಾಲಯದ ಆವರಣದಲ್ಲಿ ಕಲ್ಯಾಣ ಕರ್ನಾಟಕ ಮಾನವ ಜಿನೋಮ್ ಅಧ್ಯಯನ ಸಂಸ್ಥೆ ಸ್ಥಾಪಿಸುವಕುರಿತು. | 47.32 |
| 20 | 2024-25 | ರಾಯಚೂರು | ರಿಜಿಸ್ಟ್ರಾರ್ ಯುಎಎಸ್ ರಾಯಚೂರು. | 46.26 |
| 21 | 2024-25 | ಕ.ಕ.ಪ್ರದೇಶ | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಸತಿ ನಿಲಯ/ ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಗಳು. | 42.63 |
| 22 | 2024-25 | ವಿಜಯನಗರ | ರಿಜಿಸ್ಟ್ರಾರ್ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯ. | 42.53 |
| 23 | 2022-23 | ಕಲಬುರಗಿ | ಕಲಬುರುಗಿ ಜಿಲ್ಲೆ ಸೇಡಂ ತಾಲೂಕಿನ ಕಾಗಿಣಾ ನದಿಯಿಂದ ಏತ ನೀರಾವರಿ ಮುಖಾಂತರ ನೀರನ್ನೆತ್ತುವ ಯಡ್ಡಳ್ಳಿ ಮತ್ತು ತೇರ್ನಳ್ಳಿ ನೀರಾವರಿ ಯೋಜನಯ ಕುರಿತು. | 40.00 |
| 24 | 2024-25 | ರಾಯಚೂರು | ರಾಯಚೂರು ವಿಶ್ವವಿದ್ಯಾಲಯದ ಕುಲಸಚಿವರು. | 34.32 |
| 25 | 2023-24 & 2024-25 | ಕ.ಕ.ಪ್ರದೇಶ | ಪೋಲಿಸ್ ಇಲಾಖೆಗೆ ವಾಹನಗಳನ್ನು ಒದಗಿಸುವುದು. | 30.59 |
| 26 | 2024-25 | ಕಲಬುರಗಿ | ಗುಲ್ಬರ್ಗ ವಿಶ್ವವಿದ್ಯಾಲಯ. | 29.42 |
| 27 | 2024-25 | ವಿಜಯನಗರ | ರಿಜಿಸ್ಟ್ರಾರ್ ಕನ್ನಡ ವಿಶ್ವವಿದ್ಯಾಲಯ ಹಂಪಿ. | 25.50 |
| 28 | 2022-23 | ಯಾದಗಿರಿ | ಯಾದಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಯಾದಗಿರಿ ಆವರಣದಲ್ಲಿ ಸುಸಜ್ಜಿತಲ್ಯಾಂಡ್ರಿ ಬ್ಲಾಕ್ ಹಾಗೂ ರೋಗಿಗಳಿಗೆ ಕಿಚನ್ ಬ್ಲಾಕ್ (ಅಡುಗೆ ಮನೆ) ನಿರ್ಮಾಣ ಮಾಡುವುದು ಮತ್ತು ಅವಶ್ಯವಿರುವ ಯಂತ್ರೋಪಕರಣಗಳು/ ಸಾಮಗ್ರಿಗಳನ್ನು ಖರೀದಿಸುವುದು. | 21.48 |
| 29 | 2023-24 & 2024-25 | ಕಲಬುರಗಿ | ಕಲಬುರಗಿ ನಗರದಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಬಡಾವಣೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ಮಾಣವಾಗಿರುವ ಕಟ್ಟಡ ನೈನ್ಸ್ ಅಕಾಡೆಮಿ | 21.46 |

## 2019-20 ರಿಂದ 2024-25 ರ ವರೆಗಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿಮಂಡಳಿಯಿಂದ ಪ್ರಮುಖವಾಗಿ ಕೈಗೊಂಡಿರುವ ಕಾಮಗಾರಿಗಳ ವಿವರ.

| | | | ಕಾಮಗಾರಿಯ ಹೆಸರು | [illegible] |
|---|---|---|---|---|
| 30 | 2019-20 & 2021-22 | ಕಲಬುರಗಿ | ಕಲಬುರಗಿ ನಗರದ ಕಣ್ಣಿ ಮಾರುಕಟ್ಟೆಯಲ್ಲಿ ತರಕಾರಿ ಮಾರುಕಟ್ಟೆ ಹಾಗೂ ಕೋಲ್ಡ್ ಸ್ಟೋರೆಜ್ ನಿರ್ಮಾಣ. | 20.00 |
| 31 | 2021-22 | ವಿಜಯನಗರ | ಹಂಪಿ ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿ ಸಮುದಾಯ ಬಾನುಲಿ ಕೇಂದ್ರದಸ್ಟುಡಿಯೋ ನಿರ್ಮಾಣ ಮಾಡುವುದು. | 19.95 |
| 32 | 2024-25 | ಬೀದರ | ರಿಜಿಸ್ಟ್ರಾರ್ KVAFSU | 19.04 |
| 33 | 2024-25 | ಕ.ಕ.ಪ್ರದೇಶ | ಕುಲಸಚಿವ ತೋಟಗಾರಿಕಾ ವಿಶ್ವವಿದ್ಯಾಲಯ ಬಾಗಲಕೋಟ (ಮುನಿರಾಬಾದ್ ಮತ್ತು ಬೀದರ್). | 18.81 |
| 34 | 2023-24 | ಕ.ಕ.ಪ್ರದೇಶ | ಕ.ಕ.ಪ್ರ.ಅ.ಮಂಡಳಿಯ 7 ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 2566 ಹೆಚ್ಚುವರಿ ಅತಿಥಿ ಶಿಕ್ಷಕರಿಗೆ ಹಾಗೂ 7 ಜಿಲ್ಲೆಗಳ ಸರಕಾರಿ ಪ್ರೌಢ ಶಾಲೆಗಳಲ್ಲಿ 52 ಹೆಚ್ಚುವರಿ ಅತಿಥಿ ಶಿಕ್ಷಕರ ನೇಮಕ - ಅಕ್ಷರ ಮಿತ್ರ ಯೋಜನೆ | 18.34 |
| 35 | 2019-20, 2020-21 & 2022-23 | ಕೊಪ್ಪಳ | ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ವಿಶ್ವೇಶ್ವರಯ್ಯಾ ತಾಂತ್ರಿಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಮತ್ತು ವೃತ್ತಿ ಕೌಶಲ್ಯ ಅಭಿವೃದ್ಧಿ ಕೇಂದ್ರ ಸ್ಥಾಪನೆ | 17.00 |
| 36 | 2024-25 | ಕಲಬುರಗಿ | ವಿಟಿಯು ಬೆಳಗಾವಿ (ಪ್ರಾದೇಶಿಕ ಕೇಂದ್ರ ಕಲಬುರಗಿ). | 14.85 |
| 37 | 2022-23 | ಕಲಬುರಗಿ | ಕಲಬುರಗಿ ಕೋಟೆ ಅಭಿವೃದ್ಧಿ | 12.49 |
| 38 | 2024-25 | ಬೀದರ | ಬೀದರ ಜಿಲ್ಲೆಗೆ ಸ್ಟಾರ್ ಏರ್ ಇವರು ಬೆಂಗಳೂರು-ಬೀದರ ಮತ್ತು ಬೀದರ-ಬೆಂಗಳೂರು ವಿಮಾನಯಾನ ಸೇವೆ ನೀಡುವ ಕುರಿತು. | 12.20 |
| 39 | 2022-23 | ಬೀದರ | ಬೀದರ್ ಪಶುಸಂಗೋಪನೆ ವಿಶ್ವವಿದ್ಯಾನಿಲಯ | 10.00 |
| 40 | 2024-25 | ಕೊಪ್ಪಳ | ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನಲ್ಲಿ "ತಾಲೂಕಾ ಆಡಳಿತ ಭವನ" ಮಿನಿ ವಿಧಾನ ಸೌಧ ನಿರ್ಮಾಣ ಕಾಮಗಾರಿ. | 9.95 |
| 41 | 2024-25 | ಯಾದಗಿರಿ | ಯಾದಗಿರಿ ವೈದ್ಯಕೀಯವಿಜ್ಞಾನಗಳ ಸಂಸ್ಥೆ ಯಾದಗಿರಿಗೆ 1 MRI ಯಂತ್ರ ಖರೀದಿಸುವುದು. | 9.90 |
| 42 | 2024-25 | ಕ.ಕ.ಪ್ರದೇಶ | ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳ ವಿವಿಧ ಆಸ್ಪತ್ರೆಗಳಿಗೆ 32 Basic Life Support (BLS) ಅಂಬ್ಯುಲೆನ್ಸ್ ವಾಹನಗಳು ಒದಗಿಸುವುದು. | 9.69 |
| 43 | 2024-25 | ಕ.ಕ.ಪ್ರದೇಶ | ರಿಜಿಸ್ಟ್ರಾರ್ KSOU ಮೈಸೂರು | 9.50 |
| 44 | 2024-25 | ಬೀದರ | ಬೀದರ ಜಿಲ್ಲೆಯ ಹೊನ್ನಿಕೇರಿ ಮೀಸಲು ಅರಣ್ಯ ಮತ್ತು ಇತರೆ ಜೀವವೈವಿಧ್ಯ ಪ್ರದೇಶಗಳಲ್ಲಿ ಪರಿಸರ, ಪ್ರವಾಸೋದ್ಯಮ ಮತ್ತು ಸಂರಕ್ಷಣಾತ್ಮಕ ಕಾರ್ಯಕ್ರಮಗಳು. | 9.27 |
| 45 | 2022-23 | ರಾಯಚೂರು | ರಾಯಚೂರು ವಿಶ್ವವಿದ್ಯಾಲಯದ ಆವರಣದಲ್ಲಿ ಮೆಟ್ರಿಕ್ ನಂತರದ ಬಾಲಕಿಯರವಿದ್ಯಾರ್ಥಿ ನಿಲಯ. | 9.00 |

## 2019-20 ರಿಂದ 2024-25 ರ ವರೆಗಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿಮಂಡಳಿಯಿಂದ ಪ್ರಮುಖವಾಗಿ ಕೈಗೊಂಡಿರುವ ಕಾಮಗಾರಿಗಳ ವಿವರ.

| | | | | |
|---|---|---|---|---|
| 46 | 2023-24 &2024-25 | ಕ.ಕ.ಪ್ರದೇಶ | ಕಲಿಕಾ ಆಸರೆ. | 8.93 |
| 47 | 2023-24 | ಕಲಬುರಗಿ | ಚಿತ್ತಾಪೂರ ಪಟ್ಟಣದ ಸರಕಾರಿ ಕನ್ಯಾ ಪ್ರೌಢ ಶಾಲೆಗೆ. | 8.00 |
| 48 | 2024-25 | ಕ.ಕ.ಪ್ರದೇಶ | ಕಲಿಕೆಜೊತೆ ಕೌಶಲ್ಯ. | 8.00 |
| 49 | 2024-25 | ಕೊಪ್ಪಳ | ರಿಜಿಸ್ಟ್ರಾರ್ ಕೊಪ್ಪಳ ವಿಶ್ವವಿದ್ಯಾಲಯ ಕೊಪ್ಪಳ. | 7.79 |
| 50 | 2020-21, 2023-24 & 2024-25 | ಕಲಬುರಗಿ | ಕಲಬುರಗಿ ನಗರದಲ್ಲಿರುವ ಸರ್ಕಾರಿ ಅಂಧ ಬಾಲಕರ ಪ್ರೌಢ ಶಾಲೆ. | 7.71 |
| 51 | 2021-22 | ಕಲಬುರಗಿ | ಕಾಳಗಿಯಲ್ಲಿ ನೂತನ ಬಸ ನಿಲ್ದಾಣ ನಿರ್ಮಾಣ ಕಾಮಗಾರಿ. | 6.69 |
| 52 | 2022-23 | ಯಾದಗಿರಿ | ಹುಣಸಗಿ ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೊಸ ಕಟ್ಟಡ ನಿರ್ಮಾಣ. | 6.65 |
| 53 | 2019-20 | ಯಾದಗಿರಿ | ಸುರಪುರ ತಾಲೂಕಿನ ಕೆಂಭಾವಿ ಪಟ್ಟಣದಲ್ಲಿ ಕುಡಿಯುವ ನೀರು ಸರಬರಾಜು. | 6.62 |
| 54 | 2024-25 | ಕ.ಕ.ಪ್ರದೇಶ | ಸಮಾಜ ಕಲ್ಯಾಣ ಇಲಾಖೆಯಿಂದ ನೂತನವಾಗಿ ನಿರ್ಮಾಣಗೊಂಡಿರುವ Pre Examination Training Center Kalaburagi ರಲ್ಲಿ ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ (KAS + IAS ) ಕೋಚಿಂಗ್ ಕಾರ್ಯಕ್ರಮ. | 6.49 |
| 55 | 2020-21 | ಕೊಪ್ಪಳ | ಕೊಪ್ಪಳದಲ್ಲಿ ಸ್ನಾತಕೋತ್ತರ ಕೇಂದ್ರ ಮತ್ತು ವೃತ್ತಿಕೌಶಲ್ಯ ಅಭಿವೃದ್ಧಿ ಕೇಂದ್ರನಿರ್ಮಾಣ . | 6.00 |
| 56 | 2022-23 | ಬಳ್ಳಾರಿ | ಬಳ್ಳಾರಿಕೋಟೆಗೆ ಬೆಳಕನ್ನು ಒದಗಿಸುವುದು ಮತ್ತು ಬಳ್ಳಾರಿಯಲ್ಲಿ ನಾಗಲಚೆರ್ವು ಕೆರೆಯ ಅಭಿವೃದ್ಧಿ. | 5.44 |
| 57 | 2022-23 | ಬಳ್ಳಾರಿ | ಹರಪನಹಳ್ಳಿ ತಾಲ್ಲೂಕು ಮಾಚಿಹಳ್ಳಿ ತಾಂಡ ಮತ್ತು ಮಾಚಿಹಳ್ಳಿ-ಕೊರಚರಹಟ್ಟಿ ಗ್ರಾಮದ ಹತ್ತಿರ ಇಂಗುಕೆರೆ ನಿರ್ಮಾಣ. | 5.20 |
| 58 | 2022-23 | ಕೊಪ್ಪಳ | ಕೊಪ್ಪಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿಗಳಿಗೆ (ಹೆಣ್ಣುಮಕ್ಕಳಿಗೆ) ಹಾಸ್ಟೆಲ್ ಕಟ್ಟಡ ನಿರ್ಮಾಣ ಹಾಗೂ ಪೀಠೋಪಕರಣ ಸರಬರಾಜು. | 5.00 |
| 59 | 2019-20 | ಬೀದರ | ಬೀದರ ವಿಮಾನ ನಿಲ್ದಾಣ ಮೂಲಭೂತ ಸೌಕರ್ಯಗಳಿಗೆ. | 5.00 |
| 60 | 2022-23 | ಕಲಬುರಗಿ | ಕಲಬುರಗಿ ಜಿಲ್ಲೆಯ ಶಹಾಬಾದ ಪಟ್ಟಣದ ಇ.ಎಸ್.ಐ ಆಸ್ಪತ್ರೆ ಕಾಮಗಾರಿಗಳು. | 5.00 |
| 61 | 2023-24 | ಕಲಬುರಗಿ | ಚಿಂಚೋಳಿ ಕ್ಷೇತ್ರದ ರಾಮಲಿಂಗೇಶ್ವರ ದೇವಸ್ಥಾನ ಮೋಘಾ ಗ್ರಾಮದ ಬಳಿ ಸ್ಥಳೀಯ ನಾಲಾಕ್ಕೆ ಅಡ್ಡಲಾಗಿ ಬ್ಯಾರೇಜ್-ಕಮ್-ಸೇತುವೆ ನಿರ್ಮಾಣ. | 5.00 |
| 62 | 2024-25 | ಕಲಬುರಗಿ | ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ (KGTTI), ಕಲಬುರಗಿಯಲ್ಲಿ Centre of Excellence in CNC (Computer Numerical Control) Technology ಕೇಂದ್ರವನ್ನು ಸ್ಥಾಪಿಸುವುದು. | 4.94 |
| 63 | 2019-20 | ಯಾದಗಿರಿ | ಯಾದಗಿರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ 400 ಮೀಟರ್ ರನ್ನಿಂಗ್ ಟ್ರ್ಯಾಕ್, ಡ್ರೇನ್, ಗ್ಯಾಲರಿ ಹಾಗೂ ಇತರೆ ಕಾಮಗಾರಿಗಳ ನಿರ್ಮಾಣ. | 4.66 |
| 64 | 2023-24 | ಬೀದರ | ಭಾಲ್ಕಿಯ ಮೆಹಕರ್ ಗ್ರಾಮದಲ್ಲಿ ಮಾದರಿ ಶಾಲೆ ನಿರ್ಮಾಣ. | 4.00 |
| 65 | 2019-20 | ಬಳ್ಳಾರಿ | ಬಳ್ಳಾರಿ ತಾಲ್ಲೂಕು ಮಿಂಚೇರಿ ಗ್ರಾಮದಲ್ಲಿ ಕುಡಿಯುವ ನೀರು ಕೆರೆಗೆಹೆಚ್ಚುವರಿಯಾಗಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ. | 4.00 |
| 66 | 2023-24 & 2024-25 | ಕ.ಕ.ಪ್ರದೇಶ | ಕೌಶಲ್ಯಾಭಿವೃದ್ಧಿ ತರಬೇತಿ. | 1.40 |